


ಕೈಲಾಸ ಪರ್ವತವನ್ನು ಎತ್ತಲು ಹೆಣಗುತ್ತಿರುವ ರಾವಣ



ಸೂಕ್ಷ್ಮ ಕೆತ್ತನೆಗಳನ್ನು ಛಾಯಾಗ್ರಹಣ ಮಾಡುತ್ತಿರುವ ಪ್ರವಾಸಿಗ



ವಾಲಿ ಮತ್ತು ಸುಗ್ರೀವ ಸೆಣಸುವಾಗ ಮರೆಯಲ್ಲಿ ನಿಂತು ಬಾಣ ಬಿಡುತ್ತಿರುವ ರಾಮ



ಹಿರಣ್ಯಕಶಿಪುವಿನ ಹೊಟ್ಟೆ ಬಗೆಯುತ್ತಿರುವ ಉಗ್ರನರಸಿಂಹ

ಈ ಸಹೋದರರು ತ್ರಿಭುವನಮಹೇಶ್ವರ (ಸ್ವರ್ಗ, ಭೂಮಿ ಮತ್ತು ಪಾತಾಳ ಎಂಬ ಮೂರು ಲೋಕಗಳ ಅಧಿಪತಿ) ರೂಪದಲ್ಲಿ ಶಿವನಿಗೆ ಸುಂದರವಾದ ವಿಶಿಷ್ಟವಾದ ಕೆತ್ತನೆಗಳುಳ್ಳ ದೇವಾಲಯ ಸಂಕೀರ್ಣವನ್ನು ಅಲ್ಲಿ ನಿರ್ಮಾಣ ಮಾಡಿದರು. ನಂತರ ಕಾಲನ ಹೊಡೆತಕ್ಕೆ ಸಿಕ್ಕು ಕಾಡಿನೊಳಗೆ ಮರೆಯಾಗಿದ್ದ ಈ ದೇವಾಲಯವನ್ನು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಫ್ರೆಂಚ್ ಪರಿಶೋಧಕರು ಮರುಶೋಧಿಸಿದರು. ಈ ದೇವಾಲಯದ ಸುಂದರ ಕೆತ್ತನೆಗಳನ್ನು ಕಂಡು 'ಬಂತೆ ಸ್ರೈ' (ಸುಕೋಮಲೆಯರ ಕೋಟೆ) ಎಂಬ ಹೊಸ ಹೆಸರನ್ನು ಇಟ್ಟರು.

ಅಂಕೋರಿಯನ್ ಕಲೆಯೆಂಬ ಕಿರೀಟದಲ್ಲಿನ ರತ್ನ ಈ 'ಬಂತೆ ಸ್ರೈ' ದೇವಸ್ಥಾನ ಎನ್ನಲಾಗುತ್ತದೆ. ಗುಲಾಬಿ ಬಣ್ಣದ ಕಲ್ಲಿನಲ್ಲಿ ಸೂಕ್ಷ್ಮ ಕೆತ್ತನೆಗಳನ್ನು ಹೊಂದಿರುವ ಈ ದೇವಸ್ಥಾನದ ಕುಸುರಿ ಕೆಲಸವನ್ನು ಕಂಡ ಈ ದೇವಾಲಯದ ಶೋಧಕರು, ಇದನ್ನು ನಿರ್ಮಾಣ ಮಾಡಲು ಸುಕೋಮಲ ಹೆಣ್ಣಿನಿಂದ ಮಾತ್ರ ಸಾಧ್ಯ ಎಂದು ಉತ್ಪ್ರೇಕ್ಷೆಯಿಂದ ಹೇಳಿದ್ದುಂಟು. ಕಾಂಬೋಡಿಯಾದ ಆಂಕೋರ್ ವಾಟ್ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ದೇವಾಲಯ ಸಮುಚ್ಚಯ ಎಂದು ಹೆಸರಾಗಿದೆ. ಅದಕ್ಕೆ ಹೋಲಿಸಿದರೆ ಈ 'ಬಂತೆ ಸ್ರೈ' ದೇವಸ್ಥಾನ ಪುಟ್ಟದು. ತನ್ನ ಗಾತ್ರದ ಕೊರತೆಯನ್ನು ಇದು ಸೂಕ್ಷ್ಮ ಕೆತ್ತನೆಗಳ ಮೂಲಕ ಸರಿದೂಗಿಸಿದೆ. ಮೂರು ಆಯಾಮದ ಇಲ್ಲಿನ ಕೆತ್ತನೆಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ.

## ಪುರಾಣದ ಕಥೆ ಹೇಳುವ ಶಿಲ್ಪಗಳು

ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆದು ಸಂಹಾರ ಮಾಡುತ್ತಿರುವ ವಿಷ್ಣುವಿನ ಉಗ್ರ ಅವತಾರ ನರಸಿಂಹ; ವಿವಾಹದ ನಂತರ ನಂದಿಯ ಮೇಲೆ ಕುಳಿತು ಬರುತ್ತಿರುವ ಶಿವಪಾರ್ವತಿಯರು; ಖಾಂಡವ ವನದ ದಹನ (ಬೆಂಕಿಯನ್ನು ನಂದಿಸಲು ಇಂದ್ರ ಮೇಲಿನಿಂದ ಮಳೆ ಸುರಿಸಿದರೆ, ಅರ್ಜುನ ಮತ್ತು ಕೃಷ್ಣ ತಮ್ಮ ಬಾಣಗಳಿಂದ ಮಳೆಯನ್ನು ತಡೆದು ಅಗ್ನಿಗೆ ಕಾಡನ್ನು ನುಂಗಲು ನೆರವಾಗುತ್ತಿರುವುದು. ಸರ್ಪಗಳು ಬೆಂಕಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಸಹ ಕಾಣಬಹುದು); ಕಂಸನನ್ನು ಕೊಲ್ಲುತ್ತಿರುವ ಕೃಷ್ಣ; ಜರಾಸಂಧನ ದೇಹವನ್ನು ಎರಡು ಭಾಗವಾಗಿ ಬಗೆದು ವಧಿಸುತ್ತಿರುವ ಭೀಮಸೇನ; ವಾಲಿ ಮತ್ತು ಸುಗ್ರೀವ ಸೆಣಸುವಾಗ ಮರೆಯಲ್ಲಿ ನಿಂತು ಬಾಣ ಬಿಡುತ್ತಿರುವ ರಾಮ; ಕೈಲಾಸ ಪರ್ವತವನ್ನು ಎತ್ತಿ ಹಿಡಿದಿರುವ ರಾವಣ (ಕೈಲಾಸ ಪರ್ವತದಲ್ಲಿ ಕುಳಿತ ಶಿವ ಪಾರ್ವತಿಯರನ್ನು ಸಾಧುಗಳು ಭಯಗೊಂಡು ಬೇಡುತ್ತಿರುವುದು, ಪ್ರಾಣಿಗಳು ಅವಿತಿಟ್ಟುಕೊಂಡಿರುವುದು, ಕೈಲಾಸ ಪರ್ವತವನ್ನು ಎತ್ತಲು ಹೆಣಗುತ್ತಿರುವ ರಾವಣ); ತಪಸ್ಸಿನಲ್ಲಿ ಕುಳಿತ ಶಿವನ ಸೇವೆ ಮಾಡುತ್ತಿರುವ ಪಾರ್ವತಿ, ಬಾಣ ಹೂಡಿರುವ ಕಾಮದೇವ, ಸಾಧುಗಳು ಲೋಕಕಲ್ಯಾಣಕ್ಕಾಗಿ ಕಾಯುತ್ತಿರುವುದು; ನಟರಾಜ, ಅಪ್ಸರೆಯರು, ವಾನರ, ಗರುಡ, ಯಕ್ಷ, ಸಿಂಹ, ಸೀತಾಪಹರಣ, ದುರ್ಗೆ, ಹಯಗ್ರೀವ, ಐರಾವತದ ಮೇಲೆ ಕುಳಿತ ಇಂದ್ರ, ಕುಬೇರ, ಹಂಸದ ಮೇಲೆ ಕುಳಿತ ವರುಣ, ಕೋಣದ ಕುಳಿತ ಯಮ ಮುಂತಾದ ರಾಮಾಯಣ, ಮಹಾಭಾರತ, ಭಾಗವತ, ಶಿವ ಮತ್ತು ವಿಷ್ಣು ಪುರಾಣದ ಶಿಲ್ಪಗಳ ಸೂಕ್ಷ್ಮ ಕೆತ್ತನೆಗಳನ್ನು ಇಲ್ಲಿ ಕಂಡಾಗ ನಾವು ಭಾರತದಲ್ಲಿಯೇ ಇದ್ದೇವೆ ಎಂಬ ಭಾವನೆ ಮೂಡುತ್ತದೆ.

**ಪ್ರತಿಕ್ರಿಯಿಸಿ: feedback@sudha.co.in**